Roll No. | | | | | | | |

Series SHC

Code No. 15

- Please check that this question paper contains 5 printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains 6 questions.
- Please write down the serial number of the question before attempting it.

KANNADA

ಕನ್ನಡ

Time allowed : 3 hours *Maximum Marks : 100*

ಅನುಮತಿಸಲಾದ ಸಮಯ : 3 ಗಂಟೆ *ಗರಿಷ್ಠ ಅಂಕಗಳು : 100*

ವಿಭಾಗ A
ವ್ಯಾಕರಣ

1. (a) (i) ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : 1

ನಿನ್ನೆ ಚೆನ್ನಾಗಿ ಮಳೆ ಬಂತು.

(ii) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : 1

ರಾಜು ಚುನಾವಣೆಯಲ್ಲಿ ಸೋತನು.

(iii) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ : 1

ಅವನು ಚೆನ್ನಾಗಿ ಓದಿದ್ದರಿಂದ ಅವನಿಗೆ ಉತ್ತಮ ಅಂಕಗಳು ದೊರೆತುವು.

(iv) ಈ ಕೆಳಗಿನ ವಾಕ್ಯವನ್ನು ಭೂತಕಾಲದಲ್ಲಿ ಬರೆಯಿರಿ : 1

ಅಣ್ಣ ಬೆಂಗಳೂರಿಂದ ಬರುವರು.

(v) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : 1

ಯುದ್ಧದಲ್ಲಿ ಸಾವಿರಾರು ಜನರು ಸತ್ತರು.

(b) ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : 5

There is nothing which cannot be obtained in this world, provided man has made a proper and earnest effort. If a person, prompted by the desire to get a thing, honestly makes an attempt, he will certainly succeed in his venture. Let a person desire to obtain something in life; let him constantly strive to get it; sooner or later he is going to succeed. But, he should go on along his path without hesitation.

ಛಂದಸ್ಸು

(c) ಕೆಳಗಿನ ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಹೆಸರು ತಿಳಿಸಿ : $2\frac{1}{2}\times2=5$

(i) ಜನಕಜೆಯ ನುಯ್ಯಿ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ

(ii) ಕೇಳು ಜನಮೇಜಯಧರಿತ್ರೀ
ಪಾಲ ಮುನಿ ಮಧ್ಯದಲಿ ನಿಂದು ನೃ
ಪಾಲ ಭೀಷ್ಮಂಗೆಂದನಭ್ರಗಭೀರನಾದದಲಿ

(iii) ಗೊರವರೆ ಬೂದಿಯುಂ ಜಡೆಯುಮಕ್ಕೆ ತಪಕ್ಕೆ ತನುತ್ರಮೀ ಭಯಂ

(iv) ಅಯ್ಯಯ್ಯ ಇಂತಪ್ಪ ನನ್ನಿಯಂ ಕಂಡೆನೇ
ಕಯ್ಯಮೇಲೇ ತೋರು ವೊಡೆಯನಂ ಪಡೆದೆನೇ

(d) ಕೆಳಗಿನ ಯಾವುದಾದರೂ **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : $2\frac{1}{2}\times2=5$

(i) ಆಚಾರವೇ ಸ್ವರ್ಗ, ಅನಾಚಾರವೇ ನರಕ.

(ii) ತಾಳಿದವ ಬಾಳಿಯಾನು.

(iii) ಹಾಸಿಗೆ ಇದ್ದಷ್ಟು ಕಾಲು ಚಾಚು.

(e) (i) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ : 2

ವಿಯಚ್ಚರ, ಅತ್ಯುಗ್ರ

(ii) ಕೆಳಗಿನ ಪದಗಳ ವಿಭಕ್ತಿ ಪ್ರತ್ಯಯ ತಿಳಿಸಿ : 1

ರವಿವರ್ಮರಿಗೆ, ಇತಿಹಾಸದಲ್ಲಿ.

(iii) ಕೆಳಗಿನ ಕ್ರಿಯಾಪದಗಳ ಧಾತುಗಳನ್ನು ಬರೆಯಿರಿ : 2

ಇತ್ತುವು, ಪತ್ತಿದುವು

ವಿಭಾಗ B

2. (i) ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ :

ನಮ್ಮ ಭಾರತಕ್ಕೆ ಇಂದಿನ ದೊಡ್ಡ ಕೊರತೆ ರಾಷ್ಟ್ರಭಕ್ತಿಯಿಲ್ಲದಿರುವುದು. ವಿದ್ಯಾರ್ಥಿಗಳು ರಾಷ್ಟ್ರಭಕ್ತರಾದರೆ ನಮ್ಮ ಸಮಗ್ರ ಸಮಾಜವು ತನ್ನ ಏಳಿಗೆಯನ್ನು ತಾನೇ ಕಂಡುಕೊಂಡೀತು. ಎಲ್ಲೆಲ್ಲಿ ಯಾವ ವ್ಯಕ್ತಿಯಿಂದ, ಯಾವ ಗುಂಪಿನಿಂದ ರಾಷ್ಟ್ರಘಾತಕ ಕೃತ್ಯ ನಡೆಯುವುದೋ ಅಲ್ಲೆಲ್ಲ ನಮ್ಮ ವಿದ್ಯಾರ್ಥಿವೃಂದ ನುಗ್ಗಿ ರಾಷ್ಟ್ರಘಾತಕ ಆಸುರೀ ಶಕ್ತಿಯನ್ನು ದಮನಮಾಡೀತು. ಇದು ಅತಿ ಮಹತ್ವದ ಸಮಾಜ ಸೇವೆ. ಇದರಷ್ಟೆ ಮುಖ್ಯವಾದ ಇನ್ನೊಂದು ಸಮಾಜ ಸೇವೆಯೆಂದರೆ ನಮ್ಮ ಸಮಾಜದಲ್ಲಿ ಶಿಸ್ತು ಸಂಘಟನೆಗಳನ್ನು ಉಂಟುಮಾಡುವುದು. ಎಲ್ಲೆಲ್ಲಿ ಜನಸಂದಣಿ ಸೇರುವುದೋ ಅಲ್ಲೆಲ್ಲ ನಿಯಮಬದ್ಧತೆ ವ್ಯವಸ್ಥೆಗಳನ್ನು ಕಾಪಾಡಿಕೊಂಡು ಬರುವುದು ಸುಶಿಕ್ಷಿತ ವಿದ್ಯಾರ್ಥಿಗಳಿಗೇನೂ ಕಷ್ಟವಲ್ಲ. ವಿದ್ಯಾರ್ಥಿಗಳು ಇಂತಹ ಗುಣಗಳನ್ನು ಬೆಳೆಸಿಕೊಂಡರೆ, ಇಂದು ನಮ್ಮ ದೇಶದಲ್ಲಿ ಕಾನೂನು ವ್ಯವಸ್ಥೆಗಳಿಗಾಗಿ ವೆಚ್ಚವಾಗುವ ಕೋಟಿಗಟ್ಟಲೆಯ ಹಣ ಉಳಿತಾಯವಾದೀತು.

ಪ್ರಶ್ನೆಗಳು :

(a) ನಮ್ಮ ಭಾರತಕ್ಕೆ ಇಂದಿನ ಕೊರತೆ ಯಾವುದು ? 1

(b) ನಮ್ಮ ವಿದ್ಯಾರ್ಥಿವೃಂದ ಎಲ್ಲೆಲ್ಲಿ ನುಗ್ಗಿ ಏನನ್ನು ದಮನಮಾಡೀತು ? 2

(c) ಮುಖ್ಯವಾದ ಇನ್ನೊಂದು ಸಮಾಜ ಸೇವೆ ಯಾವುದು ? 1

(d) ಸುಶಿಕ್ಷಿತ ವಿದ್ಯಾರ್ಥಿಗಳಿಗೆ ಯಾವುದು ಕಷ್ಟವಲ್ಲ ? 2

(ii) ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ : 4

ನಮ್ಮ ದೇಶದ ರೈತರು ಮುಂಚಿನಿಂದಲೂ ಬಡವರು ಹಾಗೂ ಅವಿದ್ಯಾವಂತರು. 'ಅಪ್ಪ ನೆಟ್ಟ ಆಲದ ಮರ' ಎಂಬಂತೆ ಹಳೆಯ ಕಾಲದ ನೇಗಿಲುಗಳನ್ನೇ ಹಿಡಿದು ವ್ಯವಸಾಯಮಾಡುತ್ತಿದ್ದರು. ಜೊತೆಗೆ ಕಷ್ಟಪಡುತ್ತಿದ್ದರು. ಚಿಂತೆಯಲ್ಲಿ ಮುಳುಗುತ್ತಿದ್ದರು. ನಮ್ಮ ದೇಶವನ್ನು ಇತರ ದೇಶಗಳೊಂದಿಗೆ ಯಾವ ವಿಧದಲ್ಲಿಯೂ ಹೋಲಿಸುವಂತೆಯೇ ಇರಲಿಲ್ಲ. ಆದರೆ, ಈ ಯೋಜನೆಯಲ್ಲಿ ಪಾಶ್ಚಾತ್ಯರಿಂದ ಬಂದ ಟ್ರಾಕ್ಟರುಗಳೂ ಇನ್ನೂ ಅನೇಕ ಯಂತ್ರಗಳೂ ರೈತರ ಕೆಲಸವನ್ನು ಸುಲಭ ಮಾಡಿದುವು. ಇದೇ ಕಾಲದಲ್ಲಿ ಉದ್ಯೋಗಗಳು ಬಹು ದೊಡ್ಡ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಕಾರ್ಖಾನೆಗಳು ಸ್ಥಾಪಿಸಲ್ಪಟ್ಟವು. ಇದರಿಂದ ಹಳ್ಳಿಯಲ್ಲಿಯೇ ಕುಳಿತು ಕುಟೀರ ಉದ್ಯೋಗ, ಗೃಹ ಕೈಗಾರಿಕೆ ಮಾಡುವ ಜನರಿಗೆ ಬಹಳ ತೊಂದರೆಯಾಯಿತು. ಅದರಿಂದ ಅವರು ಪಟ್ಟಣಕ್ಕೆ ಬಂದರು. ಅಲ್ಲಿ ಕಾರ್ಖಾನೆಗಳಲ್ಲಿ ದುಡಿಯತೊಡಗಿದರು. ನಮ್ಮ ದೇಶದ ಜನರಲ್ಲಿ ಶೇಕಡ 85 ಜನರು ಅವಿದ್ಯಾವಂತರು. ಆ ಅವಿದ್ಯಾವಂತಿಕೆಯನ್ನು ಹೋಗಲಾಡಿಸಲು ಸರಕಾರದವರು ರಾತ್ರಿ ಪಾಠಶಾಲೆಗಳನ್ನು ತೆರೆದರು. ವಿದ್ಯೆಯ ಪ್ರಚಾರವನ್ನು ಹಳ್ಳಿಹಳ್ಳಿಗೂ ಮನೆಮನೆಗೂ ಮಾಡಿದರು. ಆ ಪರಿಣಾಮವಾಗಿ ವಿದ್ಯಾಭ್ಯಾಸದಲ್ಲಿ ಅತ್ಯಂತ ಹೆಚ್ಚಿನ ಉನ್ನತಿಯಾಯಿತು.

ವಿಭಾಗ C

3. (i) ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವವನ್ನು ಬರೆಯಿರಿ : 5

(a) ನಿಮ್ಮೂರಿಗೆ ನೆರೆಬಂದಾಗ .....

(b) ರಸ್ತೆ ಅಪಘಾತವನ್ನು ನೀವು ಕಣ್ಣಾರೆ ನೋಡಿದಾಗ .....

(ii) ನಿಮ್ಮ ಊರಿನಲ್ಲಿ ಕಾಲೇಜು ಇಲ್ಲದೆ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯ ಕುರಿತು ಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ. 5

(iii) ಕೆಳಗಿನ ಗದ್ಯಾಂಶವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : 5

ಪೂರ್ವಕಾಲದಿಂದಲೂ ನಮ್ಮಲ್ಲಿ ರಾಷ್ಟ್ರಾಭಿಮಾನ, ಒಗ್ಗಟ್ಟು ಕಡಿಮೆ. ನೂರಾರು ರಾಜರು ಭಾರತವನ್ನು ಆಳುತ್ತಿದ್ದರು. ಅವರಲ್ಲಿ ಐಕಮತ್ಯವಿರಲಿಲ್ಲ. ತಮ್ಮ ತಮ್ಮಲ್ಲಿ ಜಗಳವಾಗುತ್ತಿತ್ತು. ಇದರಿಂದಾಗಿ ಪರಕೀಯರು ನಮ್ಮ ದೇಶದ ಮೇಲೆ ದಾಳಿಮಾಡಿ ರಾಜ್ಯವಾಳಿದರು. ಪರಕೀಯರ ಆಳ್ವಿಕೆ ಬರಲು ನಮ್ಮ ದೇಶದ ಜನರೇ ಸಹಾಯ ಮಾಡಿದರು. ಈಗ ಭಾರತವು ಸ್ವತಂತ್ರವಾಗಿದೆ. ಪ್ರಜಾಪ್ರಭುತ್ವ ನೆಲೆಯೂರಿದೆ. ಪರಿಸ್ಥಿತಿ ಈಗ ಬದಲಾಗಿದೆ. ಭಾಷೆ, ವೇಷ, ಜಾತಿ, ಧರ್ಮಗಳ ವಿಭಿನ್ನತೆಯನ್ನು ಮರೆತು, 'ನಾವು ಭಾರತೀಯರು, ನಾವೆಲ್ಲ ಒಂದು' ಎಂಬ ಪ್ರಜ್ಞೆ

ಜಾಗೃತವಾಗಿದ್ದು ನಾಡಿನ ಪ್ರಗತಿಗಾಗಿ ನಾವೆಲ್ಲ ಭಾವೈಕ್ಯ ಹೊಂದಿ ದುಡಿಯಬೇಕಾಗಿದೆ. ಹಾಗಾದರೆ ಮಾತ್ರವೇ ನಾವು ಜಗತ್ತಿನಲ್ಲಿ ತಲೆಯೆತ್ತಿ ನಿಲ್ಲಬಹುದಾಗಿದೆ. ನಮ್ಮಲ್ಲಿ ಭಾವೈಕ್ಯ ಮೂಡದೆ ಮತ್ತೆ ಒಳಜಗಳಗಳು ಆರಂಭವಾದರೆ ಇತಿಹಾಸದ ಪುನರಾವೃತ್ತಿಯಾಗಿ ನಾವು ಮತ್ತೆ ನಮ್ಮ ಸ್ವಾತಂತ್ರ್ಯಕ್ಕೆ ಎರವಾಗಬೇಕಾಗುವುದು. ನಮ್ಮ ನಮ್ಮಲ್ಲಿಯ ದ್ವೇಷಭಾವಗಳು ತೊಲಗಿ, ಸೌಹಾರ್ದಭಾವವುಳ್ಳವರಾಗಿ 'ನಾವೆಲ್ಲ ಒಂದು, ಒಂದೇ ರಾಷ್ಟ್ರದ ನಾಗರಿಕರು; ನಮ್ಮ ದೇಶರಕ್ಷಣೆಯ ದೇಶಹಿತದ ಕಾರ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕು' ಎಂಬ ಭಾವೈಕ್ಯಭಾವವು ಮೂಡಿಬರಬೇಕು. ರಷ್ಯಾ, ಅಮೆರಿಕಾ, ಜಪಾನ್ ದೇಶಗಳ ಜನ ತಮ್ಮ ತಮ್ಮೊಳಗಿನ ಜನಾಂಗೀಯ, ಭಾಷಿಕ ಭಿನ್ನತೆಗಳನ್ನು ಮರೆತು, ನಮ್ಮ ದೇಶ ಮುಂದೆ ಬರಬೇಕೆಂಬ ಕಳಕಳಿಯಿಂದ ಒಗ್ಗಟ್ಟಿನಿಂದ ಕೆಲಸ ಮಾಡುವುದನ್ನು ನೋಡಿ ಭಾರತೀಯರಾದ ನಾವೆಲ್ಲ ಒಂದಾಗಬೇಕು. ನಮ್ಮ ಸದ್ಭಾವಗಳು ಐಕ್ಯಗೊಂಡು ರಾಷ್ಟ್ರೀಯತೆ ಜಾಗೃತಗೊಳ್ಳಬೇಕು.

ವಿಭಾಗ D
ಗದ್ಯಭಾಗ

4. (i) ವೆಂಕಟಪ್ಪನವರ ಕಲಾಸಾಧನೆಯನ್ನು ವಿವರಿಸಿ. 7

ಅಥವಾ

ಲೇಖಕರ ಪ್ರಕಾರ, ಸಮೂಹ ಮಾಧ್ಯಮಗಳ ಪ್ರಭಾವ ಎಂತಹುದು ?

(ii) ಕೆಳಗಿನ ಯಾವುದಾದರೂ **ಎರಡು** ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : 4+4=8

(ಅ) ಹೊಸ ಗಿಡದ ಶೋಧವನ್ನು ವಿದ್ಯಾರ್ಥಿಗಳು ಹೇಗೆ ಆಚರಿಸಿದರು ?

(ಆ) ಹಿಂದೆ ಮತಾಂತರಗಳು ಹೇಗೆ ನಡೆಯುತ್ತಿದ್ದುವು ?

(ಇ) ಹಸುರು ಮನೆ ಪರಿಣಾಮವನ್ನು ವಿವರಿಸಿ.

(ಈ) ವಿದ್ಯುಚ್ಛೋರ ಮತ್ತು ತಳಾರ ಇವರ ಘರ್ಷಣೆಯಲ್ಲಿ ಊರಿನವರು ಪಟ್ಟ ಪಾಡೇನು ?

ಪದ್ಯಭಾಗ

5. (a) ಅಕ್ಕ ಮಹಾದೇವಿಯ ವಚನಗಳ ಸಾರವನ್ನು ಸಂಗ್ರಹಿಸಿ ಬರೆಯಿರಿ. 7

ಅಥವಾ

ಅನ್ನದ ಸಮಸ್ಯೆಯನ್ನು ಅನ್ನಯಜ್ಞ ಕವನದಲ್ಲಿ ಬೇಂದ್ರೆಯವರು ಹೇಗೆ ವಿವೇಚಿಸಿದ್ದಾರೆ ?

(b) ಕೆಳಗಿನ ಯಾವುದಾದರೂ **ಎರಡು** ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : 4+4=8

(ಅ) ಅವಲೋಕಿನೀ ವಿದ್ಯೆ ರಾವಣನಿಗೆ ಹೇಳಿದ ಬುದ್ಧಿವಾದವೇನು ?

(ಆ) ಅರ್ಜುನನ ಶರಕೌಶಲವನ್ನು ಕವಿ ಹೇಗೆ ವರ್ಣಿಸಿದ್ದಾನೆ ?

(ಇ) ಬೆಳುದಿಂಗಳ ವೈಭವವನ್ನು ಕವಿ ಹೇಗೆ ನಿರೂಪಿಸಿದ್ದಾರೆ ?

(ಈ) ದೀಪಧಾರಿ ಕವನದಲ್ಲಿ ಮಗುವಿನ ಅಸಾಧಾರಣ ಬಯಕೆಗಳು ಹೇಗೆ ವ್ಯಕ್ತವಾಗಿವೆ ?

ನಾಟಕ

6. (a) ಸ್ವರ್ಣಲತೆಯ ಪಾತ್ರವನ್ನು ಚಿತ್ರಿಸಿ. 6

ಅಥವಾ

ವಂಶದ ಹಿರಿಮೆಯ ವಿಷಯದಲ್ಲಿ ಯಯಾತಿ - ಪುರು ಇವರಿಗಿರುವ ಭಿನ್ನಾಭಿಪ್ರಾಯಗಳನ್ನು ತಿಳಿಸಿ.

(b) ಕೆಳಗಿನ ಯಾವುದಾದರೂ **ಎರಡು** ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ : 3+3=6

(ಅ) ಚಿತ್ರಲೇಖೆಯ ಸಾವಿನ ಸಂದರ್ಭ.

(ಆ) ಪುರು ತಂದ ಉಶ್ಶಾಪ.

(ಇ) ಯಯಾತಿ ದೇವಯಾನಿಯ ಕೈಹಿಡಿದ ಹಿನ್ನೆಲೆ.

(c) ಕೆಳಗಿನ ಯಾರಾದರೂ **ಇಬ್ಬರು** ಕವಿಗಳ ಕೃತಿಪರಿಚಯ ಮಾಡಿ : 4+4=8

(ಅ) ಪಂಪ

(ಆ) ರಾಘವಾಂಕ

(ಇ) ಗೋಪಾಲಕೃಷ್ಣ ಅಡಿಗ